# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

*ಎಸ್‌ಸಿ.* 251/2021

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಸೋಮಣ್ಣ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಶ್ರೀ ಸಣ್ಣೇಗೌಡ | | **15.04.2024** |
| **ವಯಸ್ಸು** | ಃ **40** ವರ್ಷ | | |
| **ವೃತ್ತಿ** | ಃ ವ್ಯವಸಾಯ | | **ಪ್ರಾ.ಸಾ. ಃ 08** |
| **ವಾಸಸ್ಥಳ** | ಃ ಗೌಡರಹುಂಡಿ | | **ಚಾ.ಸಾ. ಃ 04** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಮೃತ ಶಿವರಾಜಪ್ಪನ ಪರಿಚಯ ಇದೆ. ಅವರು ಕೊಲೆಯಾಗಿದ್ದಾರೆ ಎಂದು ಗೊತ್ತಾಗಿತ್ತು. ಆ ಕಾಲಕ್ಕೆ ಮೈಸೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಮೃತ ಶಿವರಾಜಪ್ಪನ ಇವರ ಶವ ಪಂಚನಾಮೆ ಮಾಡಿದ್ದರು. ಆ ಕಾಲಕ್ಕೆ ಶಿವರಾಜಪ್ಪನ ತಲೆ ಮತ್ತು ಹಿಮ್ಮಡಿಗಳಿಗೆ ಗಾಯಗಳಾಗಿತ್ತು. ಅವರ ನೆತ್ತಿಯ ಮೇಲೆ ಏಟು ಬಿದ್ದಿತ್ತು ಮತ್ತು ಹಿಮ್ಮಡಿಗೆ ಕೊಚ್ಚಿದ ಗಾಯವಾಗಿತ್ತು. ಈಗ ನಾನು ನೋಡುತ್ತಿರುವ ನಿ.ಪಿ-*9* ಆ ಮಹಜರ್ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿ.ಪಿ-*9(ಬಿ)* ಎಂದು ಗುರುತಿಸಿದೆ. ಈಗ *3* ವರ್ಷಗಳ ಹಿಂದೆ ಆ ಮಹಜರ್ ಮಾಡಿದ್ದರು.

*2.* ಶವ ದೊರೆಯುವ *3-4* ದಿನಗಳ ಹಿಂದೆ ನಾನು ಶಿವರಾಜಪ್ಪನನ್ನು ನೋಡಿದ್ದೆ. ಶಿವರಾಜಪ್ಪ ನಮ್ಮ ಮನೆ ಬಳಿ ಇರುವ ಸೈಟಿಗೆ ಬಂದಿದ್ದಾಗ ಅವರನ್ನು ನಾನು ಕೊನೆಯ ಬಾರಿಗೆ ನೋಡಿದ್ದೆ. ಆ ದಿನ ಸಂಜೆ ಶಿವರಾಜಪ್ಪ ಇವರು *1*ನೇ ಆರೋಪಿತ ಶರತ್ ಕುಮಾರ್ ಇವರ ಕೊಟ್ಟಿಗೆ ಬಳಿ ಶರತ್ ಕುಮಾರ್ ನೊಂದಿಗೆ ಮಾತನಾಡುತ್ತಾ ಕುಳಿತಿದ್ದನ್ನು ನಾನು ನೋಡಿದ್ದೆ. ಆ

ಕೊಟ್ಟಿಗೆ ಮುಖ್ಯ ರಸ್ತೆಯಲ್ಲಿದೆ. ನಾನು ರಸ್ತೆಯಲ್ಲಿ ಹೋಗುವಾಗ ಅವರು ಮಾತನಾಡುತ್ತಾ ಕುಳಿತಿದ್ದನ್ನು ನೋಡಿದ್ದೆ. ಆ ನಂತರ ಪುನಃ ಯಾವತ್ತು ಶಿವರಾಜಪ್ಪನನ್ನು ನೋಡಿಲ್ಲ. ನಂತರ ಪಂಪ್ ಹೌಸ್ ಬಳಿ ಇರುವ ಶಿವರಾಜಪ್ಪನ ಶವ ದೊರೆತಿತ್ತು ಎಂದು ನನಗೆ ಗೊತ್ತಾಗಿತ್ತು. ಪೋಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ. ಶರತ್ ಕುಮಾರ್ ಮತ್ತು ಶಿವರಾಜಪ್ಪ ಕೊಟ್ಟಿಗೆ ಬಳಿ ಮಾತನಾಡುತ್ತಾ ಕುಳಿತಿದ್ದ ಬಗ್ಗೆ ನ್ಯಾಯಾಧೀಶರ ಮುಂದೆ ಹೇಳಿಕೆ ಕೊಟ್ಟಿದ್ದೆ. ಈಗ ನಾನು ನೋಡುತ್ತಿರುವ ಹೇಳಿಕೆ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಹೇಳಿಕೆಯನ್ನು ನಿ.ಪಿ-10 ಮತ್ತು ಸಹಿಯನ್ನು ನಿ.ಪಿ-10(ಎ) ಎಂದು ಗುರುತಿಸಿದೆ.

*ಈ ಹಂತದಲ್ಲಿ, ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*

*ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-*

3. ದಿಃ03.06.2021 ರಂದು ಶವ ಪಂಚನಾಮೆ ಮಾಡಿದ್ದರು ಎಂದರೆ ಮಾಡಿದ್ದು ನಿಜ ಆದರೆ ದಿನಾಂಕ ಗೊತ್ತಿಲ್ಲ. ದಿಃ28.05.2021 ರಂದು ಸಂಜೆ 4.45 ಕ್ಕೆ ನಾನು ನನ್ನ ಜಮೀನಿಂದ ಬರುತ್ತಿದ್ದಾಗ ಶರತ್ ಕಮಾರ್ ನು ಶಿವರಾಜಪ್ಪನನ್ನು ತನ್ನ ಬೈಕಿನ ಹಿಂಭಾಗ ಕೂರಿಸಿಕೊಂಡು ತನ್ನ ಜಮೀನಿನ ಕಡೆಗೆ ಹೋಗಿದ್ದನ್ನು ನೋಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಕೊಟ್ಟಿಗೆ ಬಳಿ ಕುಳಿತಿದ್ದನ್ನು ನೋಡಿದ್ದೆ. ಶಿವರಾಜಪ್ಪನ ಮಗ ಪವನ್ ಕುಮಾರ್ ನು ಮಲ್ಲಿಗಮ್ಮನ ಮಗಳು ಪ್ರೀತಿಯನ್ನು ಪ್ರೀತಿ ಮಾಡಿದ್ದರಿಂದ ಆ ಮದುವೆಗೆ ವಿರೋದ ವ್ಯಕ್ತವಾಗಿದ್ದು ಅವರ ಮದುವೆ ನಿಲ್ಲಿಸುವ ಉದ್ದೇಶನಿಂದ ದಿಃ28.05.2021 ರಂದು ಶಿವರಾಜಪ್ಪನನ್ನು ಶರತ್ ಕುಮಾರ್ ತನ್ನ ಬೈಕಿನಲ್ಲಿ ಗೌರಮ್ಮನ ಮನೆಯಿಂದ ಕರೆದುಕೊಂಡು ಹೋಗಿ ಕಬ್ಬಿನ ತೋಟದಲ್ಲಿ

ಕಬ್ಬಿಣದ ಆ್ಯಂಗೂಲರ್ ನಿಂದ ಹೊಡೆದು ಕೊಲೆ ಮಾಡಿ ನಂತರ ಅಹಲ್ಯಾ ಗ್ರಾಮದ ಮದು ಎನ್ನುವವರನ್ನು ಕರೆದುಕೊಂಡು ಬಂದು ಟ್ರಾಕ್ಟರ್ ನಲ್ಲಿ ಶಿವರಾಜಪ್ಪನ ಶವವನ್ನು ರಾಮಪುರ ನಾಲೆ ಬಳಿ ತೆಗೆದುಕೊಂಡು ಹೋಗಿ ಬಿಸಾಕಿರುವುದಾಗಿ ನನಗೆ ಗೊತ್ತಾಗಿತ್ತು ಎಂದರೆ ನಿಜ. ಶಿವರಾಜಪ್ಪನನ್ನು ಕೊಲೆ ಮಾಡಿದರೆ ಪವನ್ ಕುಮಾರ್ ಮತ್ತು ಪ್ರೀತಿಯ ಮದುವೆ ನಿಲ್ಲುತ್ತದೆ ಮತ್ತು ಶರತ್ ಕುಮಾರ್ ಮತ್ತು ಮಲ್ಲಿಗಮ್ಮಳ ಅನೈತಿಕ ಸಂಬಂಧ ಮುಂದುವರೆಯಲು ಅನುಕೂಲವಾಗುತ್ತದೆ ಎಂದು ಸಂಚು ರೂಪಿಸಿ ಆ ಸಂಚಿನ ಪ್ರಕಾರ ಶರತ್ ಕುಮಾರ್ ಶಿವರಾಜಪ್ಪನನ್ನು ಕೊಲೆ ಮಾಡಿದ್ದಾನೆ ಎಂದು ನನಗೆ ಗೊತ್ತಾಗಿತ್ತು ಎಂದರೆ ನಿಜ. ಈಗ ನಾನು ನೋಡುತ್ತಿರುವ ಪೊಟೋದಲ್ಲಿ ಕಾಣುವ ಬೈಕ್ ಶರತ್ ಕುಮಾರ್ ಶಿವರಾಜಪ್ಪನನ್ನು ಕರೆದುಕೊಂಡು ಹೋದ ಬೈಕ್ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ ಕುರಿತು ದಿಃ*28.05.2021* -------- ಹುಡುಕುತ್ತಿದ್ದರು ಮತ್ತು ಬೈಕ್ ಅನ್ನು ------ ಗುರುತಿಸುತ್ತೇನೆ ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ-*11* ಎಂದು ಗುರುತಿಸಿದೆ.

<u>ಪಾಟೀ ಸವಾಲು : 1 ನೇ ಆರೋಪಿ ಪರ ವಕೀಲರಾದ ಶ್ರೀ ಸಿ.ಎಂ.ಜೆ ರವರಿಂದಃ-</u>

*4.* ನನ್ನ ತಾಯಿ ಗ್ರಾಮ ಪಂಚಾಯಿತಿ ಸದಸ್ಯರು ಎಂದರೆ ನಿಜ. ಮೃತ ಶಿವರಾಜಪ್ಪ ನನ್ನ ತಾಯಿಯ ಚುನಾವಣೆ ಕಾಲಕ್ಕೆ ನನ್ನ ತಾಯಿಗೆ ಸಪೋರ್ಟ್ ಮಾಡಿ ಓಡಾಡುತ್ತಿದ್ದರು ಎಂದರೆ ನಿಜ. ಶಿವರಾಜಪ್ಪನಿಗೆ ನಮ್ಮ ಗ್ರಾಮದಲ್ಲಿ ಸ್ನೇಹಿತರು ಮತ್ತು ವಿರೋದಿಗಳು ಇದ್ದರು ಎಂದರೆ ನಿಜ. ನಮ್ಮ ಗ್ರಾಮದ ಪುಟ್ಟಪ್ಪನ ಮಗ ಮೂರ್ತಿ ಪರಿಚಯವಿದೆ. ಶಿವರಾಜಪ್ಪನಿಗೂ ಮೂರ್ತಿಗೂ ಜಮೀನಿನ ವಿಷಯಕ್ಕೆ ಗಲಾಟೆಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಪ್ರಸಾದ್ ಮತ್ತು ಬಸವರಾಜು

ಎನ್ನುವವರ ಪರಿಚಯವಿದೆ. ಪ್ರಸಾದ್ ಮತ್ತು ಬಸವರಾಜು ಇವರ ಜಮೀನಿನ ಪಕ್ಕದಲ್ಲಿ ಶಿವರಾಜಪ್ಪನ ಜಮೀನು ಇದೆ ಎಂದರೆ ಗೊತ್ತಿಲ್ಲ. ಪ್ರಸಾದ್ ಮತ್ತು ಬಸವರಾಜು ಇವರೊಂದಿಗೆ ಜಮೀನು ಒತ್ತುವರಿ ವಿಷಯಕ್ಕೆ ಶಿವರಾಜಪ್ಪ ಜಗಳ ಮಾಡಿದ್ದ ಎಂದರೆ ಗೊತ್ತಿಲ್ಲ. ಚೆನ್ನಪ್ಪನ ಮಗಳು ಸುಗುಣ ಎನ್ನುವವರು ಒತ್ತುವರಿಯಾಗಿದ್ದ ಜಮೀನು ಬಿಟ್ಟು ಕೊಟ್ಟಿಲ್ಲ ಎಂದು ಶಿವರಾಜಪ್ಪನ ಜೊತೆ ಜಗಳ ಮಾಡಿದ್ದರು ಎಂದರೆ ಗೊತ್ತಿಲ್ಲ. ಶಿವರಾಜಪ್ಪ ಪಂಪ್ ಹೌಸ್ ಬಳಿ ಇಸ್ಪೀಟ್ ಆಡಲು ಹೋಗುತ್ತಿದ್ದ ಎಂದರೆ ಗೊತ್ತಿಲ್ಲ. ಶರತ್ ಕುಮಾರ್ ಮತ್ತು ಶಿವರಾಜಪ್ಪನ ನಡುವೆ ಊರಿನಲ್ಲಿ ಗಲಾಟೆ ಆಗಿದ್ದನ್ನು ನೋಡಿಲ್ಲ. ಶರತ್ ಕುಮಾರ್ ಶಿವರಾಜಪ್ಪನ ಭಾಮೈದ ಎಂದರೆ ನಿಜ.

*5.* ಶಿವರಾಜಪ್ಪನ ಶವ ದೊರೆಯುವ *3-4* ದಿನಗಳ ಮೊದಲು ಶಿವರಾಜಪ್ಪ ನಮ್ಮ ಮನೆ ಬಳಿ ಇರುವ ಸೈಟ್ ನ ಬಳಿ ಬಂದ ಬಗ್ಗೆ ಈ ಮೊದಲು ಎಲ್ಲಿಯೂ ಹೇಳಿಲ್ಲ ಎಂದರೆ ನಿಜ. ಶರತ್ ಕುಮಾರ್ ಮತ್ತು ಶಿವರಾಜಪ್ಪ ಕೊಟ್ಟಿಗೆ ಬಳಿ ಮಾತನಾಡಿಕೊಂಡು ಕುಳಿತಿದ್ದ ವಿಷಯವನ್ನು ಪೋಲೀಸರ ಮುಂದೆ ಹೇಳಿಲ್ಲ ಎಂದರೆ ನಿಜ. ಶಿವರಾಜಪ್ಪನನ್ನು ಹುಡುಕಲು ನಾನು ಸಹ ಹೋಗಿದ್ದೆ. ಆದರೆ ಆ ಕಾಲಕ್ಕೆ ಯಾವುದೇ ಮಾಹಿತಿ ಗೊತ್ತಾಗಿರಲಿಲ್ಲ. ನನ್ನ ಜಮೀನು, ಶಿವರಾಜಪ್ಪನ ಜಮೀನು ಮತ್ತು ಶರತ್ ಕುಮಾರ್ ಜಮೀನು ಒಂದೇ ಕಡೆ ಇಲ್ಲ ಎಂದರೆ ನಿಜ. ಶಿವರಾಜಪ್ಪ ಮತ್ತು ಶರತ್ ಕುಮಾರ್ ಕೊಟ್ಟಿಗೆ ಬಳಿ ಮಾತಾನಾಡುತ್ತಿದ್ದರು ಎಂದು ಶಿವರಾಜಪ್ಪನ ಅಣ್ಣನ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಿವರಾಜಪ್ಪನ ಶವವನ್ನು ನನಗೆ ತೋರಿಸಿಲ್ಲ ಎಂದರೆ ಸರಿಯಲ್ಲ. ಶಿವರಾಜಪ್ಪನ ಶವ ಊದಿಕೊಂಡಿದ್ದರಿಂದ ಎಲ್ಲೆಲ್ಲಿ ಏನೇನಾಗಿತ್ತು ಎಂದು ಗೊತ್ತಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಪವನ್ ಕುಮಾರ್ ಹೇಳಿದ್ದರಿಂದ ಅದು ಶಿವರಾಜಪ್ಪನ ಶವ ಎಂದು ಗೊತ್ತಾಗಿತ್ತು ಎಂದರೆ ನಿಜ.

ಬೇರೆ ವಿಚಾರಗಳು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ನಿಜ. ಶರತ್ ಕುಮಾರ್, ಮಲ್ಲಿಗಮ್ಮ ಮತ್ತು ಶಿವರಾಜಪ್ಪನ ವಿಚಾರಗಳನ್ನು ನನಗೆ ಯಾರು ಹೇಳಿಲ್ಲ ಎಂದರೆ ನಿಜ. ಶಿವರಾಜಪ್ಪನ ಅಣ್ಣನ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**3 ನೇ ಆರೋಪಿತನ ಪರ ವಕೀಲರು ಈ ಮೇಲಿನಂತೆ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**2 ನೇ ಆರೋಪಿತನ ಪರ ವಕೀಲರು ಗೈರು ಹಾಜರಿದ್ದು ಅವರ ಪರ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

ಮರು ವಿಚಾರಣೆ:- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು